KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-394A/2022-23/273 Date: 22 JUN 2022

## ಸುತ್ತೋಲೆ

ವಿಷಯ: 2021–22ನೇ ಸಾಲಿನಿಂದ ಜಾರಿಯಲ್ಲಿರುವ ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ಎಲ್ಲ ಪದವಿ ತರಗತಿಗಳ 1ನೇ ಸೆಮಿಸ್ಟರ್‌ಗೆ SEC ವಿಷಯವಾದ Digital Fluencyಯನ್ನು 2022–23ನೇ ಸಾಲಿನಿಂದ ಕಡ್ಡಾಯವಾಗಿ ಬೋಧನೆ ಮಾಡುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಆದೇಶ ದಿನಾಂಕ 14.06.2022.

------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈ ಮೂಲಕ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ಜಾರಿಯಲ್ಲಿರುವ ಎಲ್ಲ ಪದವಿ ತರಗತಿಗಳಿಗೆ ಈ ಹಿಂದೆ **1ನೇ ಸೆಮಿಸ್ಟರ್**‌ಗೆ B.Sc ಹಾಗೂ B.A ಪದವಿಗಳಲ್ಲಿ ಸಂಬಂಧಪಟ್ಟ ವಿಷಯಗಳ SEC ವಿಷಯವನ್ನು ಹಾಗೂ ಇತರೆ ಪದವಿಗಳಲ್ಲಿ ಸಂಬಂಧಿಸಿದ ಪದವಿಯ ವಿಷಯವನ್ನು ಬೋಧಿಸಲು ಕ್ರಮಕೈಕೊಳ್ಳಲಾಗಿತ್ತು.

ಆದರೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಬೆಂಗಳೂರು ಇವರ ಸಲಹೆ ಮೇರೆಗೆ 2022–23ನೇ ಸಾಲಿನಿಂದ B.Sc. (ಕಂಪ್ಯೂಟರ್ ಸೈನ್ಸ್) ಮತ್ತು B.C.A ಪದವಿಗಳನ್ನು ಹೊರತುಪಡಿಸಿ ಇತರ ಎಲ್ಲಾ ಪದವಿಗಳ 1ನೇ ಸೆಮಿಸ್ಟರ್‌ಗೆ SEC ವಿಷಯವಾದ Digital Fluencyನ್ನು ಕಡ್ಡಾಯವಾಗಿ ಬೋಧಿಸಲು ಕ್ರಮಕೈಗೊಳ್ಳಬೇಕೆಂದು ಈ ಮೂಲಕ ತಿಳಿಯಪಡಿಸಿದೆ. ಮುಂದುವರೆದು, B.Sc. (ಕಂಪ್ಯೂಟರ್ ಸೈನ್ಸ್) ಮತ್ತು B.C.A ಪದವಿಗಳಿಗೆ ಸಂಬಂಧಪಟ್ಟ SEC ವಿಷಯಗಳನ್ನು ಈ ಹಿಂದಿನಂತೆ ಬೋಧಿಸಲು ಕ್ರಮಕೈಗೊಳ್ಳುವುದು.

Digital Fluencyನ್ನು ಭೌತಿಕವಾಗಿ ಬೋಧಿಸದೇ ಕಡ್ಡಾಯವಾಗಿ NASSCOM (ಪೋರ್ಟಲ್–ಫ್ಯೂಚರ್ ಸ್ಕಿಲ್ಸ್ ಪ್ರೈಮ್) ನಿಂದ ಆನ್‌ಲೈನ್ ಮೂಲಕ ಕಲಿಸಲು ಮಹಾವಿದ್ಯಾಲಯದಿಂದ ನೊಡಲ್ ಅಧಿಕಾರಿಗಳನ್ನು ನೇಮಿಸಿ ಅವರ ಮುಖಾಂತರ ಮಾತ್ರ ಫ್ಯೂಚರ್ ಸ್ಕಿಲ್ಸ್ ಪ್ರೈಮ್ ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳು ನೊಂದಣಿ ಮಾಡಿಕೊಂಡು ಕಲಿಯಲು ಅಗತ್ಯ ಕ್ರಮಕೈಕೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಹೆಚ್ಚಿನ ವಿವರಕ್ಕಾಗಿ ಡಾ. ಎಸ್.ಎಂ.ತುವಾರ, ಮುಖ್ಯ ನೊಡಲ್ ಅಧಿಕಾರಿಗಳು, KUD NASSCOM ಘಟಕ, ಕ.ವಿ.ವಿ. ಧಾರವಾಡ ಇವರನ್ನು ಸಂಪರ್ಕಿಸಬಹುದು.

22/6
ಕುಲಸಚಿವರು

ಗೆ,

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.
2. ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪ್ರತಿ:**

1. ನಿರ್ದೇಶಕರು, ಕಾಲೇಜು ಅಭಿವೃದ್ಧಿ ವಿಭಾಗ, ಕ.ವಿ.ವಿ. ಧಾರವಾಡ.
2. ನೊಡಲ್ ಅಧಿಕಾರಿಗಳು, UUCMS ಘಟಕ ಕ.ವಿ.ವಿ. ಧಾರವಾಡ.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಕ.ವಿ.ವಿ. ಅಂತರ್ಜಾಲ ಮುಖಾಂತರ ಬಿತ್ತರಿಸಲು ಕ್ರಮವಹಿಸುವುದು.